189:80-81 ದಿನಾಂಕ 19-06-1980ರ ಪ್ರಕಾರ ಹಂಚಿಕೆ ಮಾಡಿರುತ್ತಾರೆ. ಈಗ ನಾಗಪ್ಪ ಈರಪ್ಪ ಜಾನ್ಯಾ ಇವರು 23-2-1981ರಂದು ಮೃತಪಟ್ಟಿರುವುದರಿಂದ ಅವರ ಯಾವತ್ತು ಆಸ್ತಿಗೆ ಸದರಿಯವರ ಹಿರಿಯ ಮಗ ಪುಂಡಲಿಕ ನಾಗಪ್ಪ ಹೆಬಳೆಯವರ ಹೆಸರಿಗೆ ಮ್ಯುಟೇಷನ್ ಎಂಟ್ರಿ ಕ್ರಮ ಸಂಖ್ಯೆ: 4237ರ ಪ್ರಕಾರ ನೊಂದಾಯಿಸಿರುವುದಾಗಿ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರರವರ ಪತ್ರ ಸಂಖ್ಯೆ: ಎಲ್‌ಎನ್ಡಿ. ಇಎಸ್‌ಆರ್ 1-189:83-84 ದಿನಾಂಕ: 20-12-1983ರಂದು ಆದೇಶ ಹೊರಡಿಸಿರುತ್ತಾರೆ.

ಮಾರೂರಿಗೆ ಪ್ರೌಢಶಾಲೆ ಮಂಜೂರಾತಿ

542 - ಶ್ರೀ ಕೆ. ಸೋಮಪ್ಪ ಸುವರ್ಣ (ಮುಲ್ಕಿ ಮೂಡಬಿದ್ರೆ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾರೂರಿಗೆ ಹೈಸ್ಕೂಲಿನ ಅವಶ್ಯಕತೆಯಿದ್ದು ಮಂಜೂರಾತಿ ನೀಡಲು ಮನವಿಗಳು ಬಂದಿದೆಯೇ?

ಆ) ಈ ವರ್ಷ ಅಲ್ಲಿಯ ಹೈಸ್ಕೂಲಿಗೆ ಮಂಜೂರಾತಿ ನೀಡಲಾಗುವುದೇ?

ಇ) ಅಲ್ಲಿಯ ಮಕ್ಕಳು ಪ್ರೌಢಶಿಕ್ಷಣಕ್ಕಾಗಿ ಆರು ಕಿಲೋಮೀಟರ್‌ಗಿಂತಲೂ ಹೆಚ್ಚಿನ ದೂರ ಶಾಲೆಗೆ ಹೋಗುವ ವಿಚಾರ ಸರಕಾರಕ್ಕೆ ತಿಳಿದಿದೆಯೇ?

ಈ) ಹತ್ತಿರ ಹೈಸ್ಕೂಲ್ಗಳಲ್ಲಿ ಸೀಟು ಸಿಗದೆ ಮಕ್ಕಳು ವಿದ್ಯಾಭ್ಯಾಸ ನಿಲ್ಲಿಸಬೇಕಾದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಹೌದು.

ಆ) 1994-95ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಇ) ಇಲ್ಲ.

ಈ) ಇಲ್ಲ.

ಸಂತ್ರಸ್ತ ಮೀನುಗಾರರಿಗೆ ಮೀನುಗಾರಿಕೆ ಜೆಟ್ಟಿ ನಿರ್ಮಾಣ

497 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವ ಮಂಗಳೂರು ಬಂದರು ನಿರ್ಮಾಣ ಹಂತದಲ್ಲಿ ಸಂತ್ರಸ್ಥ ಮೀನುಗಾರರಿಗೆ ಬಂದರು ಪ್ರದೇಶದ ವ್ಯಾಪ್ತಿಯಲ್ಲಿ ಮೀನುಗಾರಿಕೆ ಜೆಟ್ಟಿ ನಿರ್ಮಿಸಲು ಆಶ್ವಾಸನೆ ನೀಡಲಾಗಿದೆಯೇ?

ಆ) ಈ ಜೆಟ್ಟಿ ನಿರ್ಮಾಣಕ್ಕಾಗಿ ಸರ್ಕಾರ ಈವರೆಗೆ ಕೈಗೊಂಡ ಕ್ರಮಗಳೇನು?

ಇ) ಸಂತ್ರಸ್ಥ ಮೀನುಗಾರರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಹೌದು.

ಅ) ನವ ಮಂಗಳೂರು ಬಂದರು ಪ್ರಾಧಿಕಾರದವರು ಇಲ್ಲಿ ಮೀನುಗಾರಿಕಾ ಬಂದರು ನಿರ್ಮಾಣದ ಬಗ್ಗೆ ಸಾಧಕ - ಭಾಧಕಗಳನ್ನು ಪರಿಶೀಲಿಸುತ್ತಿದ್ದು ಇದಕ್ಕೆ ಬೇಕಾಗಿರುವ ಮಾಹಿತಿಗಳನ್ನು ಒದಗಿಸಲಾಗಿದೆ.

ಇ) ಸಂತ್ರಸ್ಥ ಮೀನುಗಾರರಿಗೆ ಮಂಗಳೂರು ಹಳೆ ಬಂದರಿನಲ್ಲಿ ಒಂದು ಪ್ರತ್ಯೇಕ ಸಣ್ಣ ಮೀನುಗಾರಿಕಾ ಬಂದರನ್ನು ನಿರ್ಮಿಸಲಾಗಿದೆ.

ನಾಗರಹೊಳೆ ಅರಣ್ಯದಲ್ಲಿ ಬೆಂಕಿ ಅಪಘಾತ ಸಂಭವಿಸಿರುವುದು

520 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರಹೊಳೆ ಅಭಯಾರಣ್ಯ ಪ್ರದೇಶದಲ್ಲಿ ಆಗಾಗ್ಗೆ ಬೆಂಕಿ ಅನಾಹುತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇತ್ತೀಚೆಗೆ ಆ ರೀತಿ ಸಂಭವಿಸಿದ ಪ್ರಕರಣಗಳು ಯಾವುವು?

ಇ) ಈ ಅನಾಹುತಗಳು ನಡೆಯಲು ವಿಶೇಷ ಕಾರಣಗಳೇನಾದರೂ ಇವೆಯೇ?

ಈ) ಅವುಗಳನ್ನು ತಡೆಗಟ್ಟಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಬೆಂಕಿ ಅನಾಹುತ ಈ ಕೆಳಗೆ ತಿಳಿಸಿದ ಅರಣ್ಯ ಪ್ರದೇಶಗಳಲ್ಲಿ ಆಗಿರುತ್ತದೆ.

1) ನಾಗರಹೊಳೆ ರಾಷ್ಟ್ರೀಯ ಉದ್ಯಾನವನ

2) ಬಂಡೀಪುರ ರಾಷ್ಟ್ರೀಯ ಉದ್ಯಾನವನ

3) ಭದ್ರಾ ಅಭಯಾರಣ್ಯ

4) ಶೆಟ್ಟಿಹಳ್ಳಿ ಅಭಯಾರಣ್ಯ

5) ಬಿಳಿಗಿರಿರಂಗಸ್ವಾಮಿ ದೇವಸ್ಥಾನ ಅಭಯಾರಣ್ಯ

ಇ) ಹೌದು

ಈ) ಕಾಡಿಗೆ ಬೆಂಕಿ ಬೀಳುವುದನ್ನು ತಡೆಗಟ್ಟಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೆಂಕಿ ನಿರೋಧಕ ವಾಹನಗಳ ನೇಮಕ, ಬೆಂಕಿ, ಲೈನುಗಳನ್ನು ಎಳೆಯುವುದು, ಬೆಂಕಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಬೆಂಗಳೂರಿನಲ್ಲಿ ಹಾಲಿನ ಡೈರಿಯಲ್ಲಿ ನಷ್ಟ

549 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಮದರ್ ಡೈರಿಯು ಸೇರಿದಂತೆ ಯಾವ ಯಾವ ಜಿಲ್ಲಾ ಹಾಲು ಒಕ್ಕೂಟಗಳು ನಷ್ಟವನ್ನು ಅನುಭವಿಸುತ್ತಿವೆ?

ಆ) ಯಾವ ಯಾವ ವರ್ಷಗಳಿಂದ ಎಷ್ಟೆಷ್ಟು ಪ್ರಮಾಣದ ನಷ್ಟವನ್ನು ವಿವಿಧ ಜಿಲ್ಲಾ ಹಾಲು ಒಕ್ಕೂಟಗಳು ಅನುಭವಿಸುತ್ತಿವೆ. (ಮದರ್ ಡೈರಿಯೂ ಸೇರಿದಂತೆ)